OCTOBER 27, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕೇಂದ್ರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಹಾಗೂ ಕಾರ್ಮಿಕ ಕಲ್ಯಾಣ ಸಂಸ್ಥೆ, 2025–26ನೇ ಶೈಕ್ಷಣಿಕ ವರ್ಷದ, ಶಿಷ್ಯವೇತನಕ್ಕಾಗಿ ಕಾರ್ಮಿಕರ ಮಕ್ಕಳು ಅರ್ಜಿ ಸಲ್ಲಿಸುವ ಅವಧಿಯನ್ನು, ಈ ತಿಂಗಳ 31ರ ವರೆಗೆ ವಿಸ್ತರಿಸಿದೆ. ವಿವಿಧ ಕ್ಷೇತ್ರಗಳ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಕೋರ್ಸ್‌ಗಳ ಆಯ್ಕೆ ಆಧರಿಸಿ, ತಿಂಗಳಿಗೆ 10 ಸಾವಿರ ದಿಂದ 25 ಸಾವಿರ ರೂಪಾಯಿ ವರೆಗೆ, ಶಿಷ್ಯವೇತನ ಪಡೆಯಬಹುದಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ, ಬೀಡಿ ಕಾರ್ಮಿಕರ ಕ್ಷೇಮ ನಿಧಿ, ಧಾರವಾಡ ಚಿಕಿತ್ಸಾಲಯದ ವೈದ್ಯಾಧಿಕಾರಿ, ಡಾಕ್ಟರ್ ಕೆ.ಎಚ್.ಪ್ರಜ್ವಲ್.

<><><>

ಡಾಕ್ಟರ್ ಕೆ.ಎಚ್.ಪ್ರಜ್ವಲ್ ಧ್ವನಿ 42 ಸೆಕೆಂದುಗಳು

<><><>

ಆಂಧ್ರ ಪ್ರದೇಶದ, ಕರ್ನೂಲ್ ಬಳಿ, ಸಂಭವಿಸಿದ ಬಸ್ ದುರಂತದ ಹಿನ್ನೆಲೆ, ಕೆ.ಎಸ್.ಆರ್.ಟಿ.ಸಿ. ಸೇರಿದಂತೆ, ರಾಜ್ಯದ ಎಲ್ಲ ಸಾರಿಗೆ ನಿಗಮಗಳ ಮುಖ್ಯಸ್ಥರಿಗೆ, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಕೆಲವು ನಿಯಮಗಳನ್ನು ಕಡ್ಡಾಯಗೊಳಿಸುವಂತೆ, ಪತ್ರದ ಮೂಲಕ, ನಿರ್ದೇಶಿಸಿದ್ದಾರೆ. ಬಸ್‌ಗಳ ಸುಸ್ಥಿತಿ ಹಾಗೂ ನವೀಕರಣ ತುರ್ತು ಪರಿಶೀಲಿಸಿ, ಪ್ರಯಾಣಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡುವಂತೆ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಬೆಂಕಿ ತಗುಲಿ, ಸರಳವಾಗಿ ಉರಿಯುವ ಅಥವಾ ಸ್ಫೋಟಕ ವಸ್ತುಗಳನ್ನು, ಬಸ್‌ಗಳಲ್ಲಿ ಸಾಗಿಸದಂತೆ, ಎಲ್ಲ ಹವಾ ನಿಯಂತ್ರಿತ ಬಸ್‌ಗಳಲ್ಲಿ, ತುರ್ತು ಸಂದರ್ಭದಲ್ಲಿ, ಕಿಟಕಿಗಳನ್ನು ಒಡೆಯಲು, ಸೂಕ್ತ ವ್ಯವಸ್ಥೆ ಹಾಗೂ ಸರಕಿಗೆ ಮೀಸಲಿರುವ ಜಾಗದಲ್ಲಿ, ಮಲಗದಂತೆ, ನಿಗಾವಹಿಸಲು ಸಚಿವರು ಸೂಚಿಸಿದ್ದಾರೆ.

<><><>

ವಿಶ್ವ ಸಂಸ್ಥೆಯ, ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ – ಯುನೆಸ್ಕೊ, ಇಂದು, ಅಂತಾರಾಷ್ಟ್ರೀಯ ದೃಶ್ಯ, ಶ್ರಾವ್ಯ ದಾಖಲೆಗಳ ಸಂರಕ್ಷಣೆಯ, ಪ್ರಾಮುಖ್ಯತೆ ಹಾಗೂ ಸವಾಲುಗಳ ಬಗ್ಗೆ, ಜನ ಜಾಗೃತಿ ಮೂಡಿಸುವ ದಿನವನ್ನಾಗಿ ಘೋಷಿಸಿದೆ. ಭಾರತದಲ್ಲಿಯೂ, ದೃಶ್ಯ ಮತ್ತು ಶ್ರಾವ್ಯ ದಾಖಲೆಗಳ, ಐತಿಹಾಸಿಕ ಪರಂಪರೆಯನ್ನು, ಇಂದು ಸಂಭ್ರಮಿಸಲಾಗುತ್ತದೆ.

<><><>

ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಗುಡುಗು ಸಹಿತ, ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಳಗಾವಿ, ಧಾರವಾಡ, ಬೀದರ, ವಿಜಯಪುರ, ರಾಯಚೂರು, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಹಾಗೂ ಕೊಡಗು ಜಿಲ್ಲೆಗಳಲ್ಲಿಯೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

<><><>

ಕೊಪ್ಪಳ ಜಿಲ್ಲೆಯ ವಿವಿಧೆಡೆಗಳಲ್ಲಿ, ಅಕಾಲಿಕ ಮಳೆಯಿಂದ ಭತ್ತ ಬೆಳೆ ಹಾನಿಗೀಡಾಗಿದೆ. ಕಾರಟಗಿ ಹೋಬಳಿಯ 80 ಹೆಕ್ಟರ, ಸಿದ್ದಾಪುರ ಹೋಬಳಿ ವ್ಯಾಪ್ತಿಯ 858 ಹೆಕ್ಟರ ಪ್ರದೇಶಗಳಲ್ಲಿ ಬೆಳೆ ಹಾನಿಗೀಡಾದ ಬಗ್ಗೆ ಪ್ರಾಥಮಿಕ ವರದಿಯಿದೆ. ಹಾನಿಯ ಬಗ್ಗೆ ಸಮಗ್ರ ವರದಿ ನೀಡುವಂತೆ ಕಂದಾಯ ಹಾಗೂ ಕೃಷಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ಜಿಲ್ಲೆಯ ಉಳೇನೂರು, ಯರಡೋಣ, ಈಳಿಗನೂರು, ಸಿದ್ದಾಪುರ, ಮುನ್ನೂರು ಸೇರಿದಂತೆ ವಿವಿಧ ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

<><><>

ಕೊಡಗು ಜಿಲ್ಲೆ, ಮಡಿಕೇರಿ ಸಮೀಪ, ಸಣ್ಣ ವಿಮಾನ ನಿಲ್ದಾಣ ಸ್ಥಾಪನೆಗೆ, 120 ಎಕರೆ ಸಮತಟ್ಟು ಜಾಗೆಯನ್ನು, ಖಾಸಗಿಯವರಿಂದ, ಮಾರುಕಟ್ಟೆ ದರದಲ್ಲಿ ಖರೀದಿಸಲು, ರಾಜ್ಯ ಸರ್ಕಾರ ಸಿದ್ಧವಿದೆ ಎಂದು, ಮಡಿಕೇರಿ ಶಾಸಕ ಮಂಥರ್ ಗೌಡ, ತಿಳಿಸಿದ್ದಾರೆ. ಮಡಿಕೇರಿಯಲ್ಲಿ, ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆ ಆಯೋಜಿಸಿದ್ದ, ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು  ಮಾತನಾಡಿದರು. ಕುಶಾಲನಗರ ಸಮೀಪದ, ಚಿಕ್ಕ ಅಳುವಾರದಲ್ಲಿ, ವಿಮಾನ ನಿಲ್ದಾಣಕ್ಕೆ ಜಾಗೆ ಗುರುತಿಸಲಾಗಿತ್ತು. ಆ ಪ್ರದೇಶ ಸೂಕ್ತವಲ್ಲ ಎಂದು ವರದಿ ಬಂದಿದೆ. ಜಿಲ್ಲೆಯ ನಾಲ್ಕು ಕಡೆ, ಹೆಲಿಪೋರ್ಟ್ ಸ್ಥಾಪನೆಗೂ, ಸರ್ಕಾರ ಯೋಜಿಸಿದೆ, ಎಂದರು.

<><><>

ಧಾರವಾಡದ ಮಕ್ಕಳ ಅಕಾದೆಮಿ, ತನ್ನ ಸಂಸ್ಥಾಪನೆಯ, ರಜತ ಮಹೋತ್ಸವ ಸಂಭ್ರಮದಲ್ಲಿದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ, 25 ಜನ ಸಾಧಕರಿಗೆ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ, ಖ್ಯಾತ ನೇತ್ರ ತಜ್ಞ, ಪದ್ಮಶ್ರೀ ಪುರಸ್ಕೃತ ಡಾಕ್ಟರ್ ಎಂ.ಎಂ. ಜೋಶಿ, 'ಬಾಲದೀಪ್ತಿ ಪುರಸ್ಕಾರ' ನೀಡಿ ಗೌರವಿಸಿದರು. ಮಕ್ಕಳ ಅಕಾದೆಮಿ ಅಧ್ಯಕ್ಷ, ಚಿಕ್ಕ ಮಕ್ಕಳ ತಜ್ಞ ವೈದ್ಯ ರಾಜನ್ ದೇಶಪಾಂಡೆ, ಅಧ್ಯಕ್ಷತೆ ವಹಿಸಿದ್ದರು.

<><><>

ಅಂತಾರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಮಂಗಳೂರು ನಗರ ಸಿದ್ಧಗೊಂಡಿದೆ. ಈ ಮಧ್ಯಾಹ್ನ 3:30 ಕ್ಕೆ ಉರ್ವದ ನೂತನ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ ಪಂದ್ಯಾವಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ. ಭಾರತ, ರಷ್ಯಾ, ಯು.ಎ.ಇ, ಮಲೇಷ್ಯಾ, ಶ್ರೀಲಂಕಾ, ಸಿಂಗಾಪುರ ಸೇರಿದಂತೆ ಒಟ್ಟು 12 ದೇಶಗಳ ಸುಮಾರು 450 ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ.

<><><>

ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುತ್ತಿರುವುದಕ್ಕೆ ಕಡಿವಾಣ ಹಾಕಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು, ಎಂದು ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಯಾವುದೇ ಪಡಿತರ ಕಾರ್ಡ್‌ಗಳು ರದ್ದಾಗುತ್ತಿಲ್ಲ, ತೆರಿಗೆ ಕಟ್ಟುತ್ತಿರುವವರ ಬಿಪಿಎಲ್ ಕಾರ್ಡ್‌ಗಳು ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆಯಾಗುತ್ತಿವೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>